ಶ್ರೀ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯವರು

ಅ) ಉಳ್ಳಾಲ ಸಯ್ಯದ್ ಮದನಿ ದರ್ಗಾದ ಉರುಸ್ ಕಾರ್ಯಕ್ರಮಕ್ಕೆ ಆರ್ಥಿಕ ಇಲಾಖೆಯು ದಿನಾಂಕ 31-12-2009ರಂದು ಒಟ್ಟು ರೂ.100.00 ಲಕ್ಷಗಳನ್ನು ಮಂಜೂರು ಮಾಡಿ ಈ ಅನುದಾನವನ್ನು ಲೆಕ್ಕ ಶೀರ್ಷಿಕೆ 2250-00-102-5-02ರಡಿ ಒದಗಿಸಿರುವ ಅನುದಾನದಿಂದ ಬಿಡುಗಡೆ ಮಾಡಲು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ತಿಳಿಸಲಾಗಿತ್ತು.

ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ರೂ.100.00 ಲಕ್ಷಗಳ ಪೈಕಿ ರೂ.50.00 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿರುತ್ತದೆ. 2012-13ನೇ ಸಾಲಿನಲ್ಲಿ ಉಳಿದ ರೂ.50.00 ಲಕ್ಷಗಳ ಅನುದಾನ ಬಿಡುಗಡೆ ಕೋರಲಾಗಿದ್ದು, ಈ ಮೊತ್ತವನ್ನೂ ಸಹ ಬಿಡುಗಡೆಗೊಳಿಸಲು ದಿನಾಂಕ 19-11-2012ರಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ತಿಳಿಸಲಾಗಿರುತ್ತದೆ.

ಬರ ಪರಿಹಾರಕ್ಕೆ ಕೇಂದ್ರ ಸರಕಾರದಿಂದ ಬಿಡುಗಡೆಯಾದ ಅನುದಾನ

(270) 250

ಶ್ರೀ ವಸಂತಬಂಗೇರ.ಕೆ (ಬೆಳ್ತಂಗಡಿ)

ಅ) 2012ರ ಆದಿ ಭಾಗದಲ್ಲಿ ರಾಜ್ಯದಲ್ಲಿ ತಲೆದೋರಿದ ಬರದ ನಿಮಿತ್ತ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಬರ ಪರಿಹಾರ ಮೊತ್ತವೆಷ್ಟು?

ರಾಜ್ಯದ ಸರ್ಕಾರವು ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಆಪೈಕಿ ಈವರೆಗೆ ಖರ್ಚಾದ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ ಉಪ ಮುಖ್ಯಮಂತ್ರಿಗಳು ಹಾಗೂ ಕಂದಯ ಸಚಿವರು

ಅ) ಕೇಂದ್ರ ಸರ್ಕಾರದಿಂದ ಎನ್.ಡಿ.ಆರ್.ಎಫ್ ದಿಂದ ಬಿಡುಗಡೆ-ಯಾದ ಮೊತ್ತ ರೂ. 749.17 ಕೋಟಿಗಳು.

ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಮೊತ್ತ ರೂ.696.71 ಕೋಟಿಗಳು ರೂ.327.00 ಕೋಟಿಗಳನ್ನು ಸದ್ಯದಲ್ಲೇ ಬಿಡುಗಡೆಗೊ-ಳಿಸಲಾಗುವುದು.

ಜಿಲ್ಲಾಧಿಕಾರಿಗಳಿಗೆ ಜಿಲ್ಲಾವಾರು ಹಾಗೂ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿದ ವಿವರವನ್ನು ಅನುಬಂಧದಲ್ಲಿ ನೀಡಿದೆ. ಜಿಲ್ಲಾಧಿಕಾರಿಗಳು ರೂ.620.00 ಕೋಟಿ ಅನುದಾನ ಖರ್ಚು ಮಾಡಿದ್ದಾರೆ.

ಅನುಬಂಧ

ಜಿಲ್ಲಾಧಿಕಾರಿಗಳಿಗೆ ಜಿಲ್ಲಾವಾರು ಹಾಗೂ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಿದ ವಿವರಗಳು.

ಕ್ರ.ಸಂ	ಜಿಲ್ಲೆಗಳು	ಮೊತ್ತ ರೂ. ಕೋಟಿಗಳಲ್ಲಿ
1	ಬಾಗಲಕೋಟೆ	23.22
2	ಬೆಂಗಳೂರು ನಗರ	11.40
3	ಬೆಂಗಳೂರು ಗ್ರಾಮಾಂತರ	13.13
4	ಬೆಳಗಾಂ	19.86
5	ಬಳ್ಳಾರಿ	26.47
6	ಬೀದರ್	20.35
7	ಬಿಜಾಪುರ	36.32
8	ಚಾಮರಾಜನಗರ	24.01
9	ಚಿಕ್ಕಮಗಳೂರು	17.82
10	ಚಿಕ್ಕಬಳ್ಳಾಪುರ	31.77
11	ಚಿತ್ರದುರ್ಗ	28.71
12	ದಾವಣಗೆರೆ	21.20
13	ಧಾರವಡ	17.69
14	ಗದಗ	19.15
15	ಗುಲ್ಬರ್ಗಾ	30.82
16	ಹಾಸನ	36.45
17	ಹಾವೇರಿ	19.60
18	ಕಾರವಾರ	13.50
19	ಕೋಲಾರ	29.79
20	ಕೊಪ್ಪಳ	28.51
21	ಮಡಿಕೇರಿ	7.80
22	ಮಂಡ್ಯ	36.76

ಕ್ರ.ಸಂ	ಜಿಲ್ಲೆಗಳು	ಮೊತ್ತ ರೂ. ಕೋಟಿಗಳಲ್ಲಿ
23	ಮಂಗಳೂರು	9.50
24	ಮೈಸೂರು	25.22
25	ರಾಯಚೂರು	23.37
26	ರಾಮನಗರ	24.03
27	ಶಿವಮೊಗ್ಗ	17.20
28	ತುಮಕೂರು	49.28
29	ಉಡುಪಿ	6.90
30	ಯಾದಗಿರಿ	15.98
31	ಪಶು ಸಂಗೋಪಲಾನೆ ಇಲಾಖೆ	6.00
32	ಅಗ್ನಿಶಾಮಕ ಮತ್ತು ತುರ್ತು ಸೇವೆಗಳು	0.84
33	ಮಹರಾಷ್ಟ್ರ ಸರ್ಕಾರ	4.06
	ಒಟ್ಟು	696.71

ಕುಡಿಯುವ ನೀರಿಗಾಗಿ ಜಲಮಂಡಳಿಯಿಂದ ಪರ್ಯಾಯ ವ್ಯವಸ್ಥೆ

(247) 366

ಶ್ರೀ ನರೇಂದ್ರ ಬಾಬು ನ.ಲ

ಅ) ಬೇಸಿಗೆಯು ಸಮೀಪಿಸುತ್ತಿರುವುದರಿಂದ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆಯಿರುವುದರಿಂದ ಜಲಮಂಡಳಿಯು ಕುಡಿಯುವ ನೀರಿಗಾಗಿ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದೆಯೇ?

ಆ) ನಗರಗಳಲ್ಲಿ ವಿದ್ಯುತ್ ಕಡಿತ ಉಂಟಾಗುವುದೆಂದು ಸರ್ಕಾರ ಘೋಷಿಸಿರುವುದರ ಹಿನ್ನೆಲೆ ಜಲಮಂಡಳಿಯು ಕುಡಿಯುವ ನೀರು ಸಂಗ್ರಹ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಬೇಸಿಗೆಯಲ್ಲಿ ನಗರದ ನೀರಿನ ಅವಶ್ಯಕತೆ ಪೂರೈಸಲು ತೆಗೆದುಕೊಂಡಿರುವ ಮುಂಜಾಗೃತ ಕ್ರಮವೇನು?(ವಿವರ ನೀಡುವುದು)